# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿಯ 02 ಸಹಾಯಕ ಕಾರ್ಯದರ್ಶಿ ಹುದ್ದೆಗಳನ್ನು ಕಾರ್ಯದರ್ಶಿ ವೃಂದಕ್ಕೆ ಮೇಲ್ದರ್ಜೆಗೆರಿಸುವ ಕುರಿತು.

**ಓದಲಾಗಿದೆ:** 1.ಸಿ.ಇ.ಒ. & ಇ.ಎಂ., ಕೆ.ಐ.ಎ.ಡಿ.ಬಿ. ಇವರ ಪತ್ರ ಸಂಖ್ಯೆ: KIADB/Admin/1224/13157/2023-24, ದಿನಾಂಕ:18.10.2023.

2.ಸಿ.ಇ.ಒ. & ಇ.ಎಂ., ಕೆ.ಐ.ಎ.ಡಿ.ಬಿ. ಇವರ ಪತ್ರ ಸಂಖ್ಯೆ: ಕೆಐಎಡಿಬಿ/ಕೇಂಕ/ಆಡಳಿತ/1224/2328/2024-25, ದಿನಾಂಕ:09.05.2024.

**ಪ್ರಸ್ತಾವನೆ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಇಬ್ಬರು (02) ಕಾರ್ಯದರ್ಶಿಗಳು ಮತ್ತು ಒಬ್ಬರು (01) ಜಂಟಿ ನಿರ್ದೇಶಕರು ಕೇಂದ್ರ ಕಚೇರಿ ಮತ್ತು ರಾಜ್ಯದ 12 ವಲಯ ಕಚೇರಿಗಳಲ್ಲಿನ ಜಮೀನು ಹಂಚಿಕೆಗೆ ಸಂಬಂದಿಸಿದ ವಿಷಯಗಳನ್ನು 16 ಸಹಾಯಕ ಕಾರ್ಯದರ್ಶಿಗಳ ಸಹಾಯದಿಂದ ನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಖಾಲಿ ಇರುವ 02 ಸಹಾಯಕ ಕಾರ್ಯದರ್ಶಿಗಳ ಹುದ್ದೆಗಳನ್ನು ಮುಂಬಡ್ತಿ ಮೂಲಕ ಭರ್ತಿ ಮಾಡಬೇಕಾಗಿದ್ದು, ಪ್ರಸ್ತುತ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಕಾರಣ ಖಾಲಿ ಇರುತ್ತದೆ. ಪ್ರಸ್ತುತ ಅಸ್ತಿತ್ವದಲ್ಲಿರುವ ಕಾರ್ಯದರ್ಶಿ/ಜಂಟಿ ನಿರ್ದೇಶಕರ ಮೇಲಿನ ಹೊರೆಯನ್ನು ನಿವಾರಿಸಲು ಮತ್ತು SHLC/SLSWCC/DLSWCC/KIAD ಮಂಡಳಿಯಿಂದ ಯೋಜನೆಗಳ ಅನುಮೋದನೆಗೆ ಸೂಚನೆಗಳನ್ನು ನೀಡುವಲ್ಲಿ ಉದ್ಯಮಿಗಳಿಗೆ ಸಮಯೋಚಿತ ಸೇವೆಗಳನ್ನು ಒದಗಿಸಲು, ಹಂಚಿಕೆ ಪತ್ರದ ವಿತರಣೆ, ಹಂಚಿಕೆಯ ದೃಢೀಕರಣ ಪತ್ರ, ಲೀಸ್ ಕಮ್ ಸೇಲ್ ಅಗ್ರಿಮೆಂಟಗಳ ಅನುಷ್ಠಾನ ಮತ್ತು ಜಮೀನು ಮಂಜೂರು ಮಾಡಿರುವ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆಗೆ 02 ಸಹಾಯಕ ಕಾರ್ಯದರ್ಶಿಗಳ ಹುದ್ದೆಗಳನ್ನು ಮಂಡಳಿಯ ಕಾರ್ಯದರ್ಶಿ ವೃಂದಕ್ಕೆ ಮೇಲ್ದರ್ಜೆಗೆರಿಸುವ ಬಗ್ಗೆ ದಿನಾಂಕ:04.09.2023ರಂದು ನಡೆದ ಕೆಐಎಡಿ ಮಂಡಳಿಯ 386ನೇ ಸಭೆಯಲ್ಲಿ ನಿರ್ಧರಿಸಿರುವಂತೆ ಸಿಇಒ & ಇಎಂ, ಕೆಐಎಡಿಬಿ, ಬೆಂಗಳೂರು ರವರು ಮೇಲೆ ಓದಲಾದ ಕ್ರಮ ಸಂಖ್ಯೆ (1) ಮತ್ತು (2)ರ ಪತ್ರದಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಪರಿಶೀಲಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಸಿಐ 272 ಐಎಪಿ 2023, ದಿನಾಂಕ:03.01.2025, ಬೆಂಗಳೂರು

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ಹೆಚ್ಚುವರಿ ಆರ್ಥಿಕ ವೆಚ್ಚವನ್ನು ತನ್ನ ಸ್ವಂತ ಮೂಲಗಳಿಂದ ಭರಿಸಿಕೊಳ್ಳುವ ಹಾಗೂ ಮತ್ತೊಮ್ಮೆ ಸಹಾಯಕ ಕಾರ್ಯದರ್ಶಿ

ವೃಂದದಲ್ಲಿ ಹುದ್ದೆಗಳನ್ನು ಸೃಜಿಸಲು ಪ್ರಸ್ತಾವನೆ ಸಲ್ಲಿಸಬಾರದು ಎಂಬ ಷರತ್ತಿಗೊಳಪಟ್ಟು 02 ಸಹಾಯಕ ಕಾರ್ಯದರ್ಶಿ ಹುದ್ದೆಗಳನ್ನು ಕಾರ್ಯದರ್ಶಿ ವೃಂದಕ್ಕೆ ಮೇಲ್ದರ್ಜೆಗೇರಿಸಲು ಆದೇಶಿಸಿದೆ.

ಸದರಿ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 394 ವೆಚ್ಚ-1/ 2023, ದಿನಾಂಕ:18.12.2024ರ ಸಹಮತಿಯನ್ವಯ ಹೊರಡಿಸಲಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಹಾಗೂ ಅವರ ಹೆಸರಿನಲ್ಲಿ

3/1/25

**(ಸಿ.ವಿ. ಹರಿದಾಸನ್)**
ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ.)
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

**ಇವರಿಗೆ,**

1. ಪ್ರಧಾನ ಮಹಾಲೇಖಪಾಲರು (ಜಿ&ಎಸ್‌ಎಸ್‌ಎ/ಇ&ಆರ್‌ಎಸ್‌ಎ), ಕರ್ನಾಟಕ ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560001.
3. ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಕಾರ್ಯನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
4. ವಿಶೇಷ ಜಿಲ್ಲಾಧಿಕಾರಿಗಳು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1 & ಬಂ. ಹೂ), ವಿಧಾನಸೌಧ, ಬೆಂಗಳೂರು.
6. ಸಹಾಯಕ ಕಾರ್ಯದರ್ಶಿ (ಆಡಳಿತ), ಕೆಐಎಡಿಬಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಹಣಕಾಸು ನಿಯಂತ್ರಣಾಧಿಕಾರಿ, ಕೆಐಎಡಿಬಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

**ಪ್ರತಿ ಮಾಹಿತಿಗಾಗಿ;**

1. ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲ ಸೌಲಭ್ಯ ಅಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ರವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.